P and SC No. 02/2017
PW 01 (Nagaraj)

ದಿನಾಂಕಃ 03.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 1 ಮತ್ತು 4 ನೇ ಎದುರುದಾರರ ಪರ – ಶ್ರೀಮತಿ ಸಹಾಯಕ ಸರಕಾರಿ ಅಭಿಯೋಜಕರಿಂದ.

ಕೆ ಎಸ್ ಚನ್ನಬಸಪ್ಪ ಅವರಿಗೆ ಸಂಬಂಧಪಟ್ಟ ಹಣವನ್ನು ತರಲು ಎಜಿ ಕಚೇರಿಯವರು ತಿಳಿಸಿರುತ್ತಾರೆ, ಆ ಬಗ್ಗೆ ದಾಖಲಾತಿಯನ್ನು ಸಲ್ಲಿಸಿರುವುದಿಲ್ಲ. ನಮ್ಮ ತಂದೆ ತಾಯಿಗೆ ನಾವು 10 ಜನ ಮಕ್ಕಳಿದ್ದು, ಮೃತ ಕೆ ಎಸ್ ಚನ್ನಬಸಪ್ಪ 6 ನೇಯವರು. ನಾನು ಕುಟುಂಬದ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಎಜಿ ಕಚೇರಿಯವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ನಾನು ಸೆಕ್ರೆಟರಿಯೇಟ್ ಅವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಹೌದು. ನಾವು ಕೆ ಎಸ್ ಚನ್ನಬಸಪ್ಪ ಅವರ ವಾರಸುದಾರರಲ್ಲ, ನಾವು ಯಾವುದೇ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 2 ಮತ್ತು 3 ನೇ ಎದುರುದಾರರ ಪರ – ಶ್ರೀಮತಿ ಕೆಬಿಎಸ್ ವಕೀಲರಿಂದ.

ನನ್ನ ತಂದೆ ಕೆ ಎಸ್ ಚನ್ನಬಸಪ್ಪ ಅವರಿಗೆ 10 ಜನ ಮಕ್ಕಳಿದ್ದು, ಅವರಿಗೆ ಮದುವೆಯಾಗಿದೆ ಎಂದರೆ ಹೌದು. ಸಾಕ್ಷಿ ಮುಂದುವರೆದು ಅದರಲ್ಲಿ ಒಬ್ಬರಿಗೆ ಮದುವೆಯಾಗಿರುವುದಿಲ್ಲ. ಮೃತ ಕೆ ಎಸ್ ಚನ್ನಬಸಪ್ಪ ನನ್ನ ಅಣ್ಣ. ಮೃತ ಕೆ ಎಸ್ ಚನ್ನಬಸಪ್ಪ ಅವರ ಹೆಂಡತಿ 2 ನೇ ಎದುರುದಾರರಾಗಿದ್ದು, 3 ನೇ ಎದುರುದಾರ ಅವರ ಮಗ ಎಂದರೆ ಸರಿಯಲ್ಲ. 2006 ರಲ್ಲಿ ಮೃತ ಕೆ ಎಸ್ ಚನ್ನಬಸಪ್ಪ ಅವರು 2 ನೇ ಎದುರುದಾರರ ವಿರುದ್ಧ ಬಾಳ್ವೆ ಮಾಡಲು ಹೊಸಪೇಟೆ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ 04.09.2008 ರಂದು ಸದರಿ ಎಂಎಟಿ 30/2006 ರಲ್ಲಿ ಮೃತ ಕೆ ಎಸ್ ಚನ್ನಬಸಪ್ಪ ಮತ್ತು 2 ನೇ ಎದುರುದಾರರು ರಾಜಿಯಾಗಿದ್ದರು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. 2 ನೇ ಎದುರುದಾರರು ಹೂವಿನಹಡಗಲಿ ನ್ಯಾಯಾಲಯದಲ್ಲಿ Crl. Misc. 106/2006 ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ ಮೃತ ಕೆ ಎಸ್ ಚನ್ನಬಸಪ್ಪರವರು 2 ನೇ ಎದುರುದಾರರನ್ನು ಕರೆದುಕೊಂಡು ಹೋಗುವುದಾಗಿ ದಿಃ 18.08.2007 ರಂದು ರಾಜಿಯಾಗಿದ್ದರು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ.

ಮೃತ ಕೆ ಎಸ್ ಚನ್ನಬಸಪ್ಪ ಮತ್ತು 2 ನೇ ಎದುರುದಾರರು ಮದುವೆಯಾಗಿರುವ ವಿಚಾರ ನನಗೆ ಗೊತ್ತಿದ್ದರು ಸಹ ಸುಳ್ಳು ಪ್ರಮಾಣ ಪತ್ರ ಕೊಟ್ಟು ಸುಳ್ಳು ವಂಶವೃಕ್ಷ ದೃಢೀಕರಣ ಪತ್ರವನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಮೃತ ಕೆ ಎಸ್ ಚನ್ನಬಸಪ್ಪರವರಿಗೆ 2 ಮತ್ತು 3 ನೇ ಎದುರುದಾರರು ಕಾನೂನುಬದ್ಧ ವಾರಸುದಾರರು, ನಾವು ಕಾನೂನುಬದ್ಧ ವಾರಸುದಾರರಲ್ಲ ಎಂದರೆ ಸರಿಯಲ್ಲ. ಹೀಗಿದ್ದರೂ ಸಹ ನಾವು ಮೃತ ಕೆ ಎಸ್ ಚನ್ನಬಸಪ್ಪರವರ ಕಾನೂನುಬದ್ಧ ವಾರಸುದಾರರೆಂದು ಅವರಿಗೆ ಸಂಬಂಧಪಟ್ಟ ಮರಣದ ಪ್ರಯೋಜನೆಗಳನ್ನು ಪಡೆದುಕೊಳ್ಳಲು ಸುಳ್ಳು ಅರ್ಜಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.